# ಮರಾಠಿ–ಕನ್ನಡ ರಂಗಭೂಮಿ ಕುರಿತು ಚೌಗಲೆ ಉಪನ್ಯಾಸ



ಕನ್ನಡ ಮತ್ತು ಮರಾಠಿ ಸಂಸ್ಕೃತಿ ಮತ್ತು ಸಾಹಿತ್ಯದಲ್ಲಿ ಕೊಡು ಕೊಳ್ಳುವಿಕೆಯ ದೊಡ್ಡ ಪರಂಪರೆಯೇ ಇದೆ. ರಂಗಭೂಮಿಗೆ ಸಂಬಂಧಿಸಿದಂತೆ ಕನ್ನಡದ ನಾಟಕಗಳು ಮರಾಠಿ ಪ್ರಭಾವ ಹೊಂದಿವೆ. ಅಲ್ಲಿನ ಹಲವಾರು ರಂಗಕೃತಿಗಳು ಕನ್ನಡಕ್ಕೆ ಅನುವಾದಗೊಂಡಿವೆ. ಈ ಹಿನ್ನೆಲೆಯಲ್ಲಿ ಉಭಯ ಭಾಷೆಗಳನ್ನು ಬಲ್ಲ ನಾಡಿನ ಹೆಸರಾಂತ ನಾಟಕಕಾರ ಡಾ. ಡಿ.ಎಸ್. ಚೌಗಲೆ ಅವರು ಎರಡೂ ರಂಗ ಸಂಸ್ಕೃತಿಗಳ ಬಗ್ಗೆ ಮಾತನಾಡಲಿದ್ದಾರೆ.

ಇದೇ ಜ.31ರಂದು ಕನ್ನಡ–ಮರಾಠಿ ರಂಗಭೂಮಿ ಕುರಿತು ಅವರ ವಿಶೇಷ ಉಪನ್ಯಾಸವನ್ನು ಕೇಂದ್ರ ಸಾಹಿತ್ಯ ಅಕಾಡೆಮಿಯ ಶಬ್ದನಾ ಆಯೋಜಿಸಿದೆ.

'ಗಾಂಧಿ ವಿರುದ್ಧ ಗಾಂಧಿ' ಅನುವಾದಿತ ರಂಗಕೃತಿಯ ಮೂಲಕ ನಾಡಿನ ರಂಗಾಸಕ್ತರ ಗಮನ ಸೆಳೆದ ಡಾ. ಚೌಗಲೆ ಅವರು ಮರಾಠಿಯಿಂದ ಹಲವು ನಾಟಕ, ಕತೆ ಮತ್ತಿತರ ಸಾಹಿತ್ಯಕ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದವರು. ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ಕೇಂದ್ರದ ನಿರ್ದೇಶಕ ಸಿ. ಬಸವಲಿಂಗಯ್ಯ ಅವರು ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಉಪನ್ಯಾಸದ ನಂತರ ಮತ್ತು ಅಧ್ಯಕ್ಷೀಯ ಭಾಷಣಕ್ಕೂ ಮುಂಚೆ ಸಂವಾದ ಕಾರ್ಯಕ್ರಮ ನಡೆಯಲಿದೆ.

**ಸ್ಥಳ:** ಕೇಂದ್ರ ಸಾಹಿತ್ಯ ಅಕಾಡೆಮಿ ಶಬ್ದನಾ ಕಚೇರಿ, ಸೆಂಟ್ರಲ್ ಕಾಲೇಜು ಆವರಣ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ. ಜ. 31, ಶುಕ್ರವಾರ ಸಂಜೆ 5.